**<u>ದಿನಾಂಕ 20.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.</u>**

ನನ್ನ ಮುಖ್ಯ ವಿಚಾರಣಾ ಸಾಕ್ಷ್ಯವನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಯಿಸಿ ರುಜು ಮಾಡಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿವೆ.

ಅಧಿಕಾರ ಪತ್ರವನ್ನು **ನಿಪಿ 16** ಎಂದು, ಎಂ.ಎಲ್.ಸಿ ರಿಜಿಸ್ಟರ್ ಎಕ್ಸ್ ಟ್ರ್ಯಾಕ್ಟ್ ನ ಧೃಡಿಕೃತ ಪ್ರತಿಯನ್ನು (ಮೂಲ ವಹಿಯೊಂದಿಗೆ ಹೋಲಿಕೆ ಮಾಡಿ ಮೂಲ ವಹಿಯನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು) ಅನ್ನು **ನಿಪಿ 17** ಎಂದು, ಪೊಲೀಸ್ ಇಂಟಿಮೇಷನ್ ನ ಧೃಡಿಕೃತ ಪ್ರತಿಯನ್ನು **ನಿಪಿ 18** ಎಂದು, ಕೇಸ್ ಶೀಟನ್ನು **ನಿಪಿ 19** ಎಂದು, ಕ್ಷ-ಕಿರಣವನ್ನು **ನಿಪಿ 20** ಎಂದು ಗುರುತಿಸಲಾಯಿತು.

1ನೇ ಎದುರುದಾರರ ಪರ ಮಾನ್ಯ ವಕೀಲರು ಪ್ರತಿವಾದ ಪತ್ರ ಸಲ್ಲಿಸದಿರುವುದರಿಂದ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲುಃ 2ನೇ ಎದುರುದಾರರ ಪರ ಮಾನ್ಯ ವಕೀಲರಿಂದ.</u>**

ನಿಪಿ 17ರ ಪ್ರಕಾರ ದಿನಾಂಕ 15.01.2023ರಂದು ಅಪಘಾತ ಸಂಭವಿಸಿದ್ದು, ದಿನಾಂಕ 16.01.2023ರಂದು ಗಾಯಾಳು ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಗಾಯಾಳುವನ್ನು ಯಾರು ಕರೆತಂದರು ಎಂದು ನಿಪಿ 17 ರಲ್ಲಿ ನಮೂದು ಇಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಗಾಯಾಳು ಅಪಘಾತವಾದ ದಿನಾಂಕದಂದು ಎಲ್ಲಿ ಚಿಕಿತ್ಸೆ ಪಡೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 17 ರಲ್ಲಿ ವಾಹನದ ಸಂಖ್ಯೆ ನಮೂದು ಇಲ್ಲ ಎಂದರೆ ಸರಿ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ದಾಖಲಾತಿಗಳನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**